# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ
(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು–570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ–ವಿಭಾಗ,
ಸೆಸ್ಕ್, ಆಲೂರು.
ದೂ.ಸಂ. 081702–218233
E.Mail : aeealur@gmail.com

---

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಆಲೂರು/2018-19/ ದಿನಾಂಕ :

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ–23.05.2018.ರ ಬುಧವಾರದಂದು ಶ್ರೀ ಸುಚೇತನ್ ಅಧೀಕ್ಷಕ ಇಂಜಿನಿಯರ್ (ವಿ) ಹಾಸನರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ ಸುಚೇತನ್ ಅಧೀಕ್ಷಕ ಇಂಜಿನಿಯರ್ (ವಿ) ಹಾಸನ.
2. ಶ್ರೀ ನಾರಾಯಣ ಭೋವಿ ಕಾರ್ಯಪಾಲಕ ಇಂಜಿನಿಯರ್ (ವಿ)ಸಕಲೇಶಪುರ ವಿಭಾಗ
3. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ (ವಿ) ಆಲೂರು ಉಪವಿಭಾಗ
4. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ
5. ಶ್ರೀ ತೋಟಪ್ಪ,ಲೆಕ್ಕಾಧಿಕಾರಿ (ಆಂ.ಪ), ಸಕಲೇಶಪುರ ವಿಭಾಗ
6. ಶ್ರೀಮತಿ ಬಿಂದು ಸಹಾಯಕ ಇಂಜಿನಿಯರ್(ತಾಂತ್ರಿಕ) ಆಲೂರು ಉಪವಿಭಾಗ
7. ಶ್ರೀ ಅಬ್ದುಲ್,ಕಿರಿಯ ಇಂಜಿನಿಯರ್ (ವಿ) ಪಾಳ್ಯ ಶಾಖೆ.
8. ಶ್ರೀ ಮಹೇಶ್ವರಪ್ಪ, ಕಿರಿಯ ಇಂಜಿನಿಯರ್ (ವಿ) ಮಗ್ಗೆ ಶಾಖೆ.
9. ಶ್ರೀ ರಾಘವೇಂದ್ರ ಪ್ರಭಾರಿ ಕಿರಿಯ ಇಂಜಿನಿಯರ್ (ವಿ) ಆಲೂರು ಶಾಖೆ.
10. ಶ್ರೀ ರಂಗೇಗೌಡ,ಹಿರಿಯ ಸಹಾಯಕರು,ಕಂದಾಯ ಶಾಖೆ,ಆಲೂರು.

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ,ಸ್ವಾಗತಿಸುವ ಮ್ಮೂಲಕ ಸಭೆಯನ್ನು ಬೆಳಿಗ್ಗೆ 11:00 ಗಂಟೆಗೆ ಪ್ರಾರಂಭ ಮಾಡಿದರು

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1) ಶ್ರೀ ಮೊಹಮ್ಮದ್ ಸಮೀವುಲ್ಲಾ, ಮಗ್ಗೆರವರು (ಮೊಬೈಲ್ ನಂ :–9591963816) ನಿಗಮದ ವತಿಯಿಂದ ವರ್ಕಶಾಪ್ ಗೆ ವಿದ್ಯುತ್ ಸಂಪರ್ಕ ಒದಗಿಸಲು ಕಾರ್ಯದೇಶವಾಗಿದ್ದು ಉಗ್ರಾಣದಲ್ಲಿ ಆರ್.ಸಿ.ಸಿ. ಕಂಬಗಳ ಕೊರತೆ ಇದ್ದು ಆ ಆರ್.ಸಿ.ಸಿ. ಕಂಬಗಳನ್ನು ಒದಗಿಸಲು ಕೋರಿದರು.

ಸಭೆಯ ಅಧ್ಯಕ್ಷರು ಇನ್ನು 1 ವಾರದಲ್ಲಿ ಸಕಲೇಶಪುರ ಉಗ್ರಾಣಕ್ಕೆ ಆರ್.ಸಿ.ಸಿ. ಕಂಬಗಳು ಬರಲಿದ್ದು ಆರ್.ಸಿ.ಸಿ. ಕಂಬಗಳನ್ನು ಕೂಡಲೆ ನೀಡಲಾಗುವುದೆಂದು ತಿಳಿಸಿದರು.

2) ಶ್ರೀ ಸಿದ್ದೇಶ (ಮೊಬೈಲ್ ನಂ :–9448539730) ದೈತ್ಯಾಪುರ ರವರ ಮನೆಗೆ ಮಳೆಗಾಲದಲ್ಲಿ ಲೈನ್ ಟ್ರಬಲ್ ನಿಂದಾಗಿ 25–30ದಿನಗಳ ಕಾಲ ವಿದ್ಯುತ್ ಇರುವುದಿಲ್ಲ ಎಂದು ತಿಳಿಸಿದರು. ಮತ್ತು ಅವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವ 63ಕೆ.ವಿ.ಎ. ಪರಿವರ್ತಕವು ಕಾಡಿನ ಮಧ್ಯವಿರುವುದರಿಂದ ವಿದ್ಯುತ್ ಅಡಚಣೆಯಾಗುತ್ತಿದ್ದು, ಅದನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವಂತೆ ತಿಳಿಸಿದರು.

Scanned by CamScanner

ಸಭೆಯ ಅಧ್ಯಕ್ಷರು ಪಾಳ್ಯ, ಶಾಖಾಧಿಕಾರಿ ಮಗ್ಗೆ, ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಸ್ಥಳ ಪರಿಶೀಲನೆ ಮಾಡಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಸೂಚಿಸಿದರು.

3) ಆರ್.ಎ. ಕುಮಾರ್ ರಾಯಸಮುದ್ರ (ಮೊಬೈಲ್ ನಂ :-9141315608) ರವರ ಗಂಗಾ ಕಲ್ಯಾಣ ವಿಫಲವಾಗಿದ್ದು ಅದನ್ನು ಬದಲಾಯಿಸಿ ಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ಪರಿವರ್ತಕ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

4) ಕೆ.ಈ ಚಂದ್ರಶೇಖರ್, ಮಳಲಕೊಪ್ಪಲು, (ಮೊಬೈಲ್ ನಂ :-9449764351) ರವರ ತೋಟದ ಮನೆಹತ್ತಿರ ಮರ ಬಿದ್ದು ಲೈನ್ ತುಂಡಾಗಿ 3 ವರ್ಷ ಆಗಿದ್ದರು ಸರಿಪಡಿಸದೆ ಇರುವ ಬಗ್ಗೆ ತಿಳಿಸಿದರು.

ಸಭೆಯ ಅಧ್ಯಕ್ಷರು ಶಾಖಾಧಿಕಾರಿಗಳಿಗೆ 3 ದಿನದೊಳಗೆ ಕೆಲಸ ನಿರ್ವಹಿಸಿ ವರದಿ ನೀಡಲು ಸೂಚಿಸಿದರು.ಅದಕ್ಕೆ ಶಾಖಾಧಿಕಾರಿಗಳು ಅವರಿಗೆ ಬೇರೆ ಕಡೆಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಕಂಬ ಬದಲಾಯಿಸುವ ಕೆಲಸವನ್ನು ಕೂಡಲೇ ನಿರ್ವಹಿಸುವುದಾಗಿ ತಿಳಿಸಿದರು.

5) ವೆಂಕಟೇಶ್ ಶಿರಗಾವರ(ಮೊಬೈಲ್ ನಂ :-9902577696) ಕುಡಿಯುವ ನೀರಿನ ಪರಿವರ್ತಕವು ಸುಟ್ಟು ಹೋಗಿದ್ದು ಬದಲಾಯಿಸಿ ಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಅಲ್ಲಿ ಅನಧಿಕೃತ ಪಂಪ್ ಸೆಟ್‌ಗಳು ಅಧಿಕವಾಗಿದ್ದು, ಪಂಪ್ ಸೆಟ್‌ಗಳನ್ನು ಅಧಿಕೃತ ಮಾಡಿಸಿಕೊಂಡು,ಪರಿವರ್ತಕ ಬದಲಾಯಿಸಲು ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರ ವರಿಗೆ ತಿಳಿಸಿದರು.

6) ಪಾರ್ಥಗೌಡ ಬೆಟ್ಟದಹಳ್ಳಿ (ಮೊಬೈಲ್ ನಂ :-9611640068) ರವರು, ಬೆಟ್ಟದಹಳ್ಳಿ ಐ.ಪಿ ಪರಿವರ್ತಕವು ಸುಟ್ಟುಹೋಗಿದ್ದು, ಅದನ್ನು ಬದಲಾಯಿಸಿ ಕೊಡುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಅಲ್ಲಿ ಅನಧಿಕೃತ ಪಂಪ್ ಸೆಟ್‌ಗಳು ಅಧಿಕವಾಗಿದ್ದು, ಪಂಪ್ ಸೆಟ್‌ಗಳನ್ನು ಯು.ಎನ್ ಐ.ಪಿ ಯೋಜನೆಯಡಿ ಅಧಿಕೃತ ಮಾಡಿಸಿಕೊಂಡು, ಪರಿವರ್ತಕ ಬದಲಾಯಿಸಿಕೊಡಲಾಗುವುದೆಂದು ತಿಳಿಸಿದರು.

7) ಶಿವರಾಜ್ ಬೋಸ್ಮಾನಹಳ್ಳಿ, (ಮೊಬೈಲ್ ನಂ :-9738038810) ರವರು ಗಂಗಾಕಲ್ಯಾಣ ಯೋಜನೆಯಡಿ ಕಾರ್ಯದೇಶವಾಗಿದ್ದು ಇನ್ನು ಕೆಲಸ ನಿರ್ವಹಿಸದಿರುವ ತಿಳಿಸಿದರು.

ಸಭೆಯ ಅಧ್ಯಕ್ಷರು ಕೆಲಸವು ಪ್ರಗತಿಯಲ್ಲಿದ್ದು, Work Award ಹಂತದಲಿದ್ದು, ಶೀಘ್ರವಾಗಿ ಕೆಲಸವನ್ನು ನಿರ್ವಹಿಸಲಾಗುವುದೆಂದು ತಿಳಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಗತಿಯಲ್ಲಿರುವ IPDS, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ,ಗಂಗಾಕಲ್ಯಾಣ ಮತ್ತು UNIP ಯ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ವಂಧಿಸುವ ಮೂಲಕ ಸಭೆಯನ್ನು, ಮಧ್ಯಾಹ್ನ 2 :00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

4/6

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ ಉಪ-ವಿಭಾಗ,ಸೆಸ್ಕ್, ಆಲೂರು.

ಪ್ರತಿಗಳನ್ನು ಗೌರವಪೂರ್ವಕವಾಗಿ:

1..ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ., ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.

2.ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.

3. ಲೆಕ್ಕಾಧಿಕಾರಿ (ಆಂ.ಪ) ಹಾಸನ ವಿಭಾಗ

4. ಲೆಕ್ಕಾಧಿಕಾರಿ ಸಕಲೇಶಪುರ ವಿಭಾಗೀಯ ಕಛೇರಿ.

Scanned by CamScanner